



ಕಟ್ಟುವೆವು ನಾವು ಹೊಸ ನಾಡೊಂದನು ಎನ್ನುವ ಉತ್ಸಾಹದಲ್ಲಿನ ಮಕ್ಕಳು

ಪರಸ್ಪರ ಆಂತರಿಕ ವಿರೋಧವೂ ಇದೆ. ಯಾವ ಗುಂಪು ಯಾವ ಹೊತ್ತಿನಲ್ಲಾದರೂ ದಾಳಿ ಮಾಡಬಹುದು. ಒಂದೇ ಒಂದು ಮನೆ ಅಥವಾ ಕಟ್ಟಡದ ಗೋಡೆಯೂ ಗುಂಡಿನ ಗುರುತು ಇಲ್ಲದೇ ಇರುವುದನ್ನು ನಾನು ಅಲ್ಲಿ ಕಾಣಲೇ ಇಲ್ಲ.

ಇಸ್ಲಾಮಿಕ್ ಸ್ಟೇಟ್‌ನ ಸಾಮ್ರಾಜ್ಯಶಾಹಿ ರಕ್ತಪಿಪಾಸುಗಳು ಅಲ್ಲಿ ನಾಶವಾಗಿದ್ದಾರೆ. ಆದರೂ ಯಾವ ಕ್ಷಣದಲ್ಲಾದರೂ ಮತ್ತೆ ಅವರ ಪಾತಕ ಸಿದ್ಧಾಂತ ತಲೆ ಎತ್ತಬಹುದು. ಸದ್ಯ ಅವರು ಸೃಷ್ಟಿಸಿರುವ ನರಕ ಮಾತ್ರ ಈಗಲೂ ನರಳಾಡುತ್ತಿದೆ. ಐಸಿಸ್ ಉಗ್ರರ ಪತ್ನಿಯರು ವಿಧವೆಯರಾಗಿದ್ದಾರೆ, ಮಕ್ಕಳು ಅನಾಥರಾಗಿದ್ದಾರೆ. ಯುದ್ಧದಲ್ಲಿ ಶರಣಾದ ನಿಶ್ಶಸ್ತ್ರಧಾರಿ ಐಸಿಸ್ ಉಗ್ರರು ಸೆರೆವಾಸದಲ್ಲಿದ್ದಾರೆ. ಸೆರೆಯಾದ ನಿರಾಶ್ರಿತರ ಸೆಲ್‌ಗಳಂತೂ ನರಕದ ಪ್ರತಿರೂಪಗಳಂತೆ ಇವೆ. ಅಲ್ಲಿ ಮೂಲಭೂತ ಸೌಲಭ್ಯಗಳಿಲ್ಲ. ಇನ್ನೂರು ಜನರಿಗೆ ಒಂದು ಶೌಚಾಲಯ. ಸಮರ್ಪಕ ನೀರೂ ಇಲ್ಲ. ಮಳೆ ಬಂದರಂತೂ ಕೊಚ್ಚೆಯಲ್ಲಿ ಮುಳುಗಿ ಎದ್ದಂತೆ ಬಿಡಾರಗಳು ಕಾಣಿಸುತ್ತವೆ. ಬಹುತೇಕ ಕೈದಿಗಳು ರೋಗಪೀಡಿತರಂತೆ ಕಾಣಿಸುತ್ತಾರೆ.

ಬಾಗೌಸ್‌ನಲ್ಲಿ 2019ರಲ್ಲಿ ಐಸಿಸ್ ಉಗ್ರರ ವಿರುದ್ಧ ಖುರ್ದಿಷ್‌ಗಳು ನಡೆಸಿದ ಹೋರಾಟದಲ್ಲಿ ಶಸ್ತ್ರಾಸ್ತ್ರ ಖಾಲಿಯಾಗಿ ಉಗ್ರರು ಶರಣಾಗಿದ್ದರು. ಆ ಸಂದರ್ಭದಲ್ಲಿ ಒಟ್ಟು 11 ಸಾವಿರ ಮಂದಿಯನ್ನು ಖುರ್ದಿಷಿಗಳು ತಮ್ಮ ವಶಕ್ಕೆ ತೆಗೆದುಕೊಂಡರು. ಬೇರೆ ಬೇರೆ ಹೋರಾಟ ಹತ್ಯೆಗಳನ್ನೂ ನಾನು ನೋಡಿದ್ದೇನೆ. ದೇಹವೇ ಛಿದ್ರ ಆಗಿ ಮಾಂಸ ದಿಕ್ಕಾಪಾಲಾದ ದೇಹವನ್ನೂ ಕಂಡಿದ್ದೇನೆ. ಅದೆಲ್ಲಕ್ಕಿಂತ ಇಲ್ಲಿನ ಸೆರೆಯಾಳುಗಳ ಜೀವನ ಅಮಾನುಷವಾಗಿ ನನಗೆ ಕಾಣಿಸಿತು. ಅಲ್ ಹೋಲ್ ಮತ್ತು ಅಲ್ ರೋಜ್ ಎಂಬ ಎರಡು ಸೆರೆಯಾಳುಗಳ ಪುನರ್ವಸತಿ ಶಿಬಿರಗಳನ್ನು ಖುದ್ದು ನೋಡಿದಾಗ ಹಾಗೆನಿಸಿತು. ಅನೇಕ ಪುಟ್ಟ ಪುಟ್ಟ ಸೆರೆಮನೆಗಳನ್ನು ದೊಡ್ಡ ರಕ್ಷಣಾ ಗೋಡೆಯ ಒಳಗೆ ನಿರ್ಮಿಸಿದ್ದಾರೆ.



ಐಸಿಸ್ ಯುದ್ಧ ಕೈದಿಗಳು

## ನರಕ ಮಾರ್ಗ ಸೂಚಕಿಯರು

ಖುರ್ದಿಷ್ ಬುಡಕಟ್ಟು ಜನಾಂಗ ಇಸ್ಲಾಂ ಪಾಲಿಸಿದರೂ ಬುರ್ಖಾ ಧರಿಸುವುದಿಲ್ಲ. ಸೈನ್ಯದಲ್ಲಿ ಸೆಣಸಾಡಲು ಹಿಂದೇಟು ಹಾಕುವುದಿಲ್ಲ. ಅಲ್ಲಿನ ಮಹಿಳೆಯರಿಗೆ ಐಸಿಸ್ ಉಗ್ರರನ್ನು ಕೊಲ್ಲುವುದು ಹೆಮ್ಮೆಯ ಸಂಗತಿ. ಅವರ ನಂಬಿಕೆಯ ಪ್ರಕಾರ ಯುದ್ಧದಲ್ಲಿ ಪುರುಷನೊಬ್ಬ ಮಹಿಳೆಯಿಂದ ಹತ್ಯೆಯಾದರೆ ಆತನಿಗೆ ಸ್ವರ್ಗದಲ್ಲಿ ಸ್ಥಾನವಿಲ್ಲ. ಐಸಿಸ್ ಉಗ್ರರನ್ನು ನರಕಕ್ಕೆ ಕಳುಹಿಸುವುದು ಅವರಿಗೆ ಸಾಹಸ. ಮಿಷನ್ ಗನ್ ಹಿಡಿದ ಯುವತಿಯೊಬ್ಬಳು ತಾನು ಐದು ಜನರನ್ನು ನರಕಕ್ಕೆ ಕಳಿಸಿದ್ದೇನೆ ಎಂದು ಬೀಗಿದಳು.

## ಭಾರತಕ್ಕೆ ಬರುವ ತವಕದಲ್ಲಿ...

ಆಕೆ ಅಮಾನಿ ಫಾತಿಮಾ, ಮುಂಬೈ ಮೂಲದವಳು. ಆರು ವರ್ಷಗಳ ಹಿಂದೆ ಆಕೆಯ ಗಂಡ ಇಸ್ತಾಂಬುಲ್‌ಗೆ ಕರೆದುಕೊಂಡು ಬಂದಿದ್ದನಂತೆ. ಅಲ್ಲಿಂದ ಊರೂರು ಅಲೆದರು. ಹೋಟೆಲ್‌ಗಳೇ ತಂಗುದಾಣಗಳಾದವು. ಫಾತಿಮಾಳ ಗಂಡ ಸ್ನೇಹಿತರೆಂದು ದಿನವಿಡೀ ಹೊರಹೋದರೆ, ಅವಳು ಮಾತ್ರ ರೂಮಿನಲ್ಲಿಯೇ ಇರುತ್ತಿದ್ದಳು. ಈ ನಿಶ್ಚಿತ ನೆಲೆಯಿಲ್ಲದ ಸಂಸಾರದಲ್ಲೇ ಎರಡು ಹೆಣ್ಣುಮಕ್ಕಳು ಜನಿಸಿವೆ. ನಂತರ ಅವರು ಬಾಗೌಸ್‌ಗೆ ಬಂದು ತಂಗಿದರು. 2019ರ ಕಲಹದಲ್ಲಿ ಫಾತಿಮಾಳ ಗಂಡ ಕೊನೆಯುಸಿರೆಳೆದ. ಐಸಿಸ್ ಸಂಪೂರ್ಣ ಸೋಲನ್ನು ಒಪ್ಪಿಕೊಂಡಿದ್ದೂ ಬಾಗೌಸ್‌ನಲ್ಲೇ.